ದಿನಾಂಕಃ 13.12.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ</u>**

1 ನೇ ಪ್ರತಿವಾದಿ ನನ್ನ ತಾಯಿ. ನಮ್ಮ ಸ್ವಾಧೀನದಲ್ಲಿರುವ ಜಮೀನಿನ ಸಂಬಂಧ ನಕ್ಷೆಯನ್ನು ಹಾಜರು ಪಡಿಸಿದ್ದೇನೆ. ಸದರಿ ಜಮೀನಿನ ಚಕ್ಕಬಂಧಿಯನ್ನು ಪ್ರತಿವಾದಿ ಪತ್ರದಲ್ಲಿ ನಮೂದು ಮಾಡಲಾಗಿದೆ. ಪ್ರತಿವಾದಿಪತ್ರದಲ್ಲಿ ತಿಳಿಸಿರುವಂತೆ ಕುಂದೂರು ಗ್ರಾಮದ ಸ ನಂ.79 ರ 3 ಎಕರೆ 30 ಗುಂಟೆ ಜಮೀನಿನ ಪೂರ್ವಕ್ಕೆ - ವಾದಿಯ ಮನೆ ಇದೆ. ಪಶ್ಚಿಮಕ್ಕೆ - ನನ್ನ ಮನೆ ನಂತರ ಬೇಲಿ, ಅದಾದ ನಂತರ ರೊನಾಲ್ಡ್ ಸಲ್ಡಾನ ರವರ ಜಮೀನು ಇದೆ. ದಕ್ಷಿಣಕ್ಕೆ- ಜಮೀನಿನ ಬೇಲಿ ನಂತರ ರಸ್ತೆ ಇದೆ. ಉತ್ತರಕ್ಕೆ- ಜಮೀನಿನ ಬೇಲಿ ನಂತರ ಸುಬ್ಬಯ್ಯ ರವರ ಜಮೀನು ಇದೆ.

ಸ ನಂ.79 ರಲ್ಲಿ ಒಟ್ಟು 38 ಜನರಿಗೆ ಜಮೀನು ಮಂಜೂರು ಆಗಿದೆ. ಆ ರೀತಿ ಮಂಜೂರಾದ ಜಮೀನುಗಳನ್ನು ಕ್ರಮ ಸಂಖ್ಯೆಯ ಆಧಾರದ ಮೇಲೆ ಗುರುತಿಸಲಾಗಿದೆ. ಆ ರೀತಿ ನನ್ನ ತಂದೆಯ ಹೆಸರಿಗೆ ಬಂದ ಜಮೀನನ್ನು ಲಿಸ್ಟ್ ನಲ್ಲಿ ಕ್ರ. ಸಂಖ್ಯೆ 21 ಮತ್ತು ಮಂಜೂರಾತಿ ಸ್ಕೆಚ್ ನಲ್ಲಿ ಕ್ರ. ಸಂಖ್ಯೆ 20(ಎ) ಎಂದು ಗುರುತಿಸಲಾಗಿದೆ. ಸದರಿ ಜಮೀನಿನ ಮಂಜೂರಾತಿ ನಕ್ಷೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಮಂಜೂರಾತಿ ನಕ್ಷೆಯನ್ನು ಹಾಜರು ಪಡಿಸಿದರೆ ನಾನು ಹೇಳಿರುವ ಚೆಕ್ಕುಬಂಧಿ ಹೊಂದಾಣಿಕೆ ಆಗುವುದಿಲ್ಲ ಎಂದು ದುರುದ್ದೇಶದಿಂದ ಅಂತಹ ನಕ್ಷೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಹೇಳಿದ ಜಮೀನಿಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿ ನೀಡಿಲ್ಲ, ಆದರೆ ತಾತ್ಕಾಲಿಕ ಸಾಗುವಳಿ ಚೀಟಿಯನ್ನು ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಆ ಜಮೀನಿನ ಖಾತೆ ಮಾಡಿಕೊಡುವಂತೆ ನನ್ನ ತಂದೆಯೂ ಸಹ ಅರ್ಜಿ ಸಲ್ಲಿಸಿದ್ದು ನಂತರ ನಾನು ಸಹ ಹಲವಾರು ರ್ಜಿಗಳನ್ನು ಸಲ್ಲಿಸಿದ್ದೇನೆ. ಆ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಹೇಳಿದ ಜಮೀನು 1984 ರಲ್ಲಿ ಮಂಜೂರಾಗಿದೆ. ಮಂಜೂಗಿದೆ ಎಂದು ಹೇಳಿರುವ ಜಮೀನಿಗೆ ಸಂಬಂಧಿಸಿದಂತೆ ಮರ ಮಲ್ಕಿ ಕಟ್ಟಿರುವ ಬಗ್ಗೆ ಗೊತ್ತಿಲ್ಲ. ನಮ್ಮ ಸ್ವಾಧೀನದಲ್ಲಿರುವ ಜಮೀನಿನಲ್ಲಿ ಸಿಲ್ವರ್, ಕಾಫಿ ಮತ್ತು ಬಾಳೆ ಬೆಳೆದಿದ್ದೇವೆ. ಆ ಬಗ್ಗೆ ಭಾವಚಿತ್ರಗಳನ್ನು ಹಾಜರು ಪಡಿಸಿದ್ದು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಹಾಜರು ಪಡಿಸಿರುವ ಭಾವಚಿತ್ರಗಳನ್ನು ನನ್ನ ಮೊಬೈಲ್ ಕ್ಯಾಮರಾದಲ್ಲಿ ನಾನೇ ತೆಗೆದಿದ್ದೇನೆ. ಸದರಿ ಭಾವಚಿತ್ರಗಳನ್ನು ಮೂಡಿಗೆರೆಯ ಒಂದು ಸ್ಟೂಡಿಯೋದಲ್ಲಿ ಪ್ರಿಂಟ್ ಮಾಡಿಸಿದ್ದು ಸ್ಟೂಡಿಯೋ ಹೆಸರು ನೆನಪಿಲ್ಲ. ಸದರಿ ಸ್ಟೂಡಿಯೋದಿಂದ ದೃಢೀಕರಣಪತ್ರ ಪಡೆದುಕೊಂಡು ಹಾಜರು

ಪಡಿಸಿಲ್ಲ , ಆದರೆ ಸಿಡಿ ಹಾಜರು ಪಡಿಸಿದ್ದೇನೆ. ಫೋಟೋ ಮತ್ತು ಸಿಡಿ ಬಗ್ಗೆ ರಶೀದಿ ಹಾಜರು ಪಡಿಸಿಲ್ಲ.

ನಿಡಿ.16 ನಾನು ಹೇಳಿದ ಜಮೀನಿಗೆ ಸಂಬಂಧಪಟ್ಟ ಭಾವಚಿತ್ರ ಅಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿಪಾದನೆಗೆ ಪೂರಕವಾಗಲಿ ಎಂದು ನಿಡಿ.16 ರ ಭಾವಚಿತ್ರಗಳನ್ನು ಸೃಷ್ಠಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಭಾವಚಿತ್ರಗಳಲ್ಲಿ ಯಾವುದೇ ಕಾಫಿ ಗಿಡಗಳು ಕಾಣುತ್ತಿಲ್ಲ ಹಾಗೂ ಅದರಲ್ಲಿ ಕಾಣುವ ಬಾಳೆ ಗಿಡಗಳು ಇತ್ತೀಚಿಗೆ ನಾಟಿ ಮಾಡಿದ ಬಾಳೆ ಗಿಡಗಳು ಎಂದರೆ ಸರಿಯಲ್ಲ. ಭಾವಚಿತ್ರಗಳಲ್ಲಿ ಕಾಣುತ್ತಿರುವ ಬೇಲಿ ಹೊಸದಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದ ಜಮೀನಿನ ಮಂಜೂರಾತಿ ಸಕ್ರಮೀಕರಣವಾದ ಜಮೀನು ಆಗಿದೆ. ಆ ಜಮೀನು ಮಂಜೂರಾತಿಯಾದ ನೂರು ವರ್ಷದ ಪೂರ್ವದಲ್ಲೇ ನಮ್ಮ ಪೂರ್ವಜರು ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದರು. ಆ ಜಮೀನಿಗೆ ಸಂಬಂಧಿಸಿದಂತೆ ನಾವು ನಮೂನೆ 50 ಅಥವಾ 53 ರಲ್ಲಿ ಅರ್ಜಿ ಸಲ್ಲಿಸಲಾಗಿಲ್ಲ.

ಯಾವುದೇ ಜಮೀನಿನ ಸಾಗುವಳಿ ಚೀಟಿ ಕೊಟ್ಟ ನಂತರವೇ ಆ ಜಮೀನಿಗೆ ಪ್ರವೇಶ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಗುವಳಿ ಚೀಟಿ ಕೊಡುವ ಮುನ್ನಾ ಜಮೀನಿನ ಸ್ವಾಧೀನದಲ್ಲಿ ಇದ್ದರೆ ಆ ಜಮೀನಿಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿ ನೀಡಲಾಗುವುದಿಲ್ಲ ಎಂದರೆ ಸರಿಯಲ್ಲ. ನಾವು ಪರಿಶಿಷ್ಠ ಪಂಗಡಕ್ಕೆ ಸಂಬಂಧಿಸಿದರು. ಪರಿಶಿಷ್ಠ ಪಂಗಡದ ವ್ಯಕ್ತಿಗಳು ಅರಣ್ಯ ಪ್ರದೇಶದಲ್ಲಿ ಇದ್ದರೆ ಅವರಿಗೆ ಆ ಜಮೀನಿನ ಮೇಲೆ ಅರಣ್ಯ ಹಕ್ಕು ನೀಡಲಾಗುವುದು ಎಂದರೆ ಸರಿ. ನಾನು ಹೇಳಿದಂತೆ 38 ಜನರಿಗೆ ಮಂಜೂರಿಯಾದ ಜಮೀನು ಅರಣ್ಯ ಇಲಾಖೆಯ ಜಮೀನು ಆದ ಕಾರಣ ಆ ಜಮೀನುಗಳ ಸಾಗುವಳಿ ಚೀಟಿಯನ್ನು ನೀಡಲಾಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಜಮೀನನ್ನು ಮಂಜೂರು ಮಾಡಲು ಅರಣ್ಯ ಇಲಾಖೆಯ ಒಪ್ಪಿಗೆ ಪಡೆಯಬೇಕು ಎಂದರೆ ಸರಿಯಲ್ಲ. ಕಂದಾಯ ಜಮೀನುಗಳಲ್ಲಿ ದಟ್ಟವಾದ ಮರಗಳು ಇದ್ದಲ್ಲಿ ಆ ಬಗ್ಗೆ ಅರಣ್ಯ ಇಲಾಖೆಯ ವರದಿ ಪಡೆಯಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ಜಮೀನಿನಲ್ಲಿ ದಟ್ಟವಾದ ಮರಗಳು ಇದ್ದಲ್ಲಿ ಆ ಜಮೀನುಗಳ ಮಂಜೂರಾತಿಗೆ ಅರಣ್ಯ ಇಲಾಖೆಯವರು ಒಪ್ಪಿಗೆ ನೀಡುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ಜಮೀನುಗಳಲ್ಲಿ ವಿರಳವಾದ ಮರಗಳು ಇದ್ದಲ್ಲಿ ಆ ಬಗ್ಗೆ ಮರ ಮಾಲ್ಕಿ ನಿಗಧಿ ಪಡಿಸಿ ಕಂದಾಯ ಇಲಾಖೆಗೆ ಅರಣ್ಯ ಇಲಾಖೆಯವರು ವರದಿ ನೀಡುತ್ತಾರೆ ಎಂದರೆ ಗೊತ್ತಿಲ್ಲ. ನಮಗೆ ಮಂಜೂರಾತಿಯಾದ ಜಮೀನಿಗೆ ಮರ ಮಾಲ್ಕಿ ಕಟ್ಟುವಂತೆ ಯಾವುದೇ ನೋಟಿಸ್ ಬಂದಿಲ್ಲ.

ನಾನು ಹೇಳಿದ ಜಮೀನಿನಲ್ಲಿ ದಟ್ಟವಾದ ಮರಗಳು ಇರುವ ಕಾರಣ ಆ ಜಮೀನಿನ ಮಂಜೂರಾತಿ ನೀಡಬಾರದು ಎಂದು ಅರಣ್ಯ ಇಲಾಖೆಯವರು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ನಮಗೆ ಇಲ್ಲಿಯವರೆಗೂ ಸಾಗುವಳಿ ಚೀಟಿಯನ್ನು ನೀಡಲಾಗಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸಾಗುವಳಿ ಚೀಟಿ ನೀಡಲಾಗದ ಕಾರಣ ನಾನು ಹೇಳಿದ ಜಮೀನಿನ ಸ್ವಾಧೀನವನ್ನು ನೀಡಲಾಗಿಲ್ಲ ಹಾಗೂ ಆ ಜಮೀನಿನ ಸ್ವಾಧೀನದಲ್ಲಿ ನಾವು ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನುಗಳಿಗೆ ಸಾಗುವಳಿ ಚೀಟಿ ಹಾಗೂ ಆ ಜಮೀನಿನ ಸ್ವಾಧೀನವನ್ನು ನಮಗೆ ನೀಡಲಾಗದ ಕಾರಣ ನಾವು ಜಿಲ್ಲಾಧಿಕಾರಿಗಳ ಮುಂದೆ ಪ್ರತಿಭಟನೆ ಮಾಡಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸಾಗುವಳಿ ಚೀಟಿ ನೀಡಲಾಗದ ಕಾರಣ ಹಾಗೂ ಜಮೀನುಗಳ ಒತ್ತುವರಿ ಇದ್ದ ಕಾರಣ ಪ್ರತಿಭಟನೆ ಮಾಡಲಾಗಿದೆ. ಸಾಕ್ಷಿಗೆ ವಿಜಯ ಕರ್ನಾಟಕ, ನಮ್ಮ ಚಿಕ್ಕಮಗಳೂರು ದಿನಪತ್ರಿಕೆ ದಿನಾಂಕ 25.09.2020 ರಲ್ಲಿ ಪ್ರಕಟಗೊಂಡ ಪತ್ರಿಕಾ ಪ್ರಕಟಣೆಯನ್ನು ತೋರಿಸಿ ಅದು ತಾವು ಪ್ರತಿಭಟನೆ ಮಾಡಿದ ಸಂಬಂಧ ಪ್ರಕಟಣೆಗೊಂಡ ಸುದ್ದಿ ಎಂದರೆ ಸಾಕ್ಷಿ ಹೌದು ಒಂದು ಒಪ್ಪುತ್ತಾರೆ. ಸದರಿ ಪತ್ರಿಕಾ ಪ್ರಕಟಣೆಯ ನಕಲನ್ನು ನಿಪಿ.10 ಎಂದು ಗುರುತಿಸಲಾಯಿತು.

ಪ್ರಸ್ತುತ ದಾವೆಯನ್ನು ವಾದಿಯು 3 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಆ ಜಮೀನಿಗೆ ಸಂಬಂಧಿಸಿದಂತೆ ವಾದಿಯು ಸಾಗುವಳಿ ಚೀಟಿ, ಖಾತೆ ಮತ್ತು ಪಹಣಿಗಳನ್ನು ಹಾಜರು ಪಡಿಸಿದ್ದಾರೆ ಎಂದರೆ ಸರಿ, ಅದರೆ ಅದು ಬೇರೆ ಜಾಗಕ್ಕೆ ಸೇರಿದ್ದಾಗಿದೆ. ವಾದಿಯು ದಾವಾ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಜಮೀನು ಮಂಜೂರಾದ ಬಗ್ಗೆ ನಾವು ಯಾವುದೇ ಪ್ರಾಧಿಕಾರದ ಮುಂದೆ ತಕರಾರು ಸಲ್ಲಿಸಿಲ್ಲ. ವಾದಿಗೆ ಜಮೀನು ಮಂಜೂರಿ ಆಗಿರುವ ಬಗ್ಗೆ ನನಗೆ ಬುದ್ಧಿ ತಿಳಿದಾಗಿನಿಂದ ತಿಳಿದಿದೆ. ವಾದಿಗೆ ಮಂಜೂರಾದ ಜಮೀನಿನಲ್ಲಿ ವಾದಿ ಕಾಫಿ ಗಿಡಗಳನ್ನು ಬೆಳೆದಿದ್ದಾರೆ ಎಂದರೆ ಸರಿ, ಅದರೆ ಆ ಜಮೀನು ಬೇರೆ ಕಡೆ ಇದೆ.

ಕುಂದೂರು ಗ್ರಾಮದ ಸ ನಂ.79 ರ ಯಾವುದೇ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಕೃಷಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಜಮೀನು ಮತ್ತು ನಮಗೆ ಮಂಜೂರಾದ ಜಮೀನುಗಳು ಬೇರೆ ಬೇರೆ ಎಂದರೆ ಸರಿಯಲ್ಲ. ವಾದಿಯು ದಾವಾ ಜಮೀನಿಗೆ ಯಾವ ಚಕ್ಕುಬಂಧಿ ನೀಡಿದ್ದಾರೆ ನನಗೆ ಗೊತ್ತಿಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.